ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 03-12-2025 ರಂದು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಎನ ವಕೀಲರಿಂದಃ**

ನಾನು ಅಪಘಾತ ಆದ ದಿನ ಹೆಲ್ಮೆಟ್ ನ್ನು ಧರಿಸಿದ್ದೆನು. ನನ್ನ ತಂದೆಯಾದ ಮೃತ ಸುಬ್ರಾಯ ರಾಮ ಹೆಗಡೆ ರವರು ಹೆಲ್ಮೆಟ್ ಧರಿಸಿರಲಿಲ್ಲ. ಅಪಘಾತ ಆಯಿತು ಎಂದು ಹೇಳಲಾದ ಸ್ಥಳದ ಸುತ್ತಮುತ್ತ ಅರಣ್ಯ ಪ್ರದೇಶ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಟ್ಟಿಕ್ಕೈ ಜಗದಂಬಾ ಪ್ರೌಢ ಶಾಲೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪಘಾತದ ನಂತರ ನಾನು ಶಿರಸಿಯ ಟಿ ಎಸ್ ಎಸ್ ಆಸ್ಪತ್ರೆಗೆ ಹೋಗಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡದ ಎಸ್ ಡಿ ಎಂ ಆಸ್ಪತ್ರೆಗೆ ದಾಖಲಾಗಿರುತ್ತೇನೆ.

2. ನಾನು ಆ ದಿನ ನಮ್ಮ ಮನೆಯಿಂದ ನೀರಗಾನ್ ಕ್ರಾಸ್ ಕಡೆಯಿಂದ ಹೋಗುತ್ತಿದ್ದು ಸದರಿ ನೀರಗಾನ್ ಕ್ರಾಸ್ ಎತ್ತರದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಗೋಳಿಮಕ್ಕಿ ಶಿರಸಿ ಹೆರೂರು ರಸ್ತೆಯ ಎರಡೂ ಕಡೆಗಳಲ್ಲಿ ತಿರುವುಗಳು ಇರುತ್ತವೆ ಎಂದರೆ ಸರಿ. ಗೋಳಿಮಕ್ಕಿ ಶಿರಸಿ ಹೆರೂರು ರಸ್ತೆಯ ಎರಡೂ ಕಡೆಗಳಲ್ಲಿ ಅರಣ್ಯ ಪ್ರದೇಶ , ಅರಣ್ಯ ಬೆಟ್ಟ ಇರುತ್ತದೆ ಎಂದರೆ ಸರಿ.

3. ಸದರಿ ಅಪಘಾತ ಆಯಿತು ಎಂದು ಹೇಳುವ ಸ್ಥಳದ ಪಕ್ಕದ ತಟ್ಟಿಕ್ಕೈ ಜಗದಂಬಾ ಪ್ರೌಢ ಶಾಲೆಯ ಮುಂದುದೆ ಹಂಪ್ಸ ಇರುತ್ತದೆ ಎಂದರೆ ಸರಿಯಲ್ಲ. ಆ ದಿನ ನಾವು ನೀರಗಾನ್ ಕ್ರಾಸ್ ನಿಂದ ಹೆರೂರಿನ ಗಣಪತಿ ದೇವಸ್ಥಾನಕ್ಕೆ ಬೈಕ್ ನಲ್ಲಿ ಹೋಗುತ್ತಿದ್ದಾಗ ಸದರಿ ಅಪಘಾತ ಆಗಿರುತ್ತದೆ. ಸಾಕ್ಷಿ ಮುಂದುವರೆದು ಆ ದಿನ ತಟ್ಟಿಕ್ಕೆ ಕ್ರಾಸ್ ಬಳಿ ತಿರುವು ತೆಗೆದುಕೊಂಡು ಹೆರೂರು ಗ್ರಾಮದ ಕಡೆ ಬಂದು ರಸ್ತೆಯ ಎಡಭಾಗದಲ್ಲಿ ನಿಂತಿದ್ದಾಗ ಸದರಿ ಅಪಘಾತ ಆಗಿರುತ್ತದೆ. ನಿ.ಪಿ-9 ದೂರಿನಲ್ಲಿ ಆ ದಿನ ಸದರಿ ಅಪಘಾತ ಸಮಯದಲ್ಲಿ ನಮ್ಮ ವಾಹನವನ್ನು ಚಲಾಯಿಸಿಕೊಂಡು ಹೋಗುವಾಗ ಅಪಘಾತ ಆಗಿರುತ್ತದೆ ಎಂದು ಹೇಳಿರುವ ವಿಷಯ ತಪ್ಪಾಗಿರುತ್ತದೆ.

4. ಸದರಿ ಅಪಘಾತ ಸಮಯದಲ್ಲಿ ನನ್ನ ಬೈಕ್ ನ್ನು ರಸ್ತೆಯ ಎಡಭಾಗದ ರಸ್ತೆಯ ಅಂಚಿನಿಂದ ಒಂದುವರೆ - ಎರಡು ಅಡಿ ದೂರದಲ್ಲಿ ನಿಲ್ಲಿಸಿರುತ್ತೇವೆ. ಆ ದಿನ ನಾನು ನನ್ನ ಬೈಕ್ ನ್ನು ನೀರಗಾನ್ ಕ್ರಾಸ್ ನಿಂದ ಹೆರೂರು -ಶಿರಸಿ ಮುಖ್ಯ ರಸ್ತೆಗೆ ಬರುವಾಗ ವಾಹನ ಸಂಚಾರವನ್ನು 30 ಸೆಕೆಂಡ್ ಗಮನಿಸಿ ಸದರಿ ಮುಖ್ಯ ರಸ್ತೆಗೆ ಬಂದಿರುತ್ತೇನೆ. ನೀರಗಾನ್ ಕ್ರಾಸ್ ನಿಂದ ಶಿರಸಿ ಹೆರೂರು ಮುಖ್ಯ ರಸ್ತೆಯಲ್ಲಿ ತಿರುವುಗಳು ಇರುವುದರಿಂದ ಸುಮಾರು 50 ಅಡಿ ದೂರದ ವರೆಗೆ ವಾಹನಗಳ ಸಂಚಾರವನ್ನು ಗಮನಿಸಬಹುದು ಎಂದರೆ ಸರಿ.

5. ನಾನು ಆ ದಿನ ಸದರಿ ನೀರಗಾನ್ ಕ್ರಾಸ್ ನಿಂದ ಶಿರಸಿ-ಹೆರೂರು ಮುಖ್ಯ ರಸ್ತೆಗೆ ಹೋಗಲು ನನಗೆ ಯಾವುದೇ ತೊಂದರೆ ಇರಲಿಲ್ಲ.

6. ಸಾಮಾನ್ಯವಾಗಿ ನವೆಂಬರ್ ತಿಂಗಳಲ್ಲಿ ಚಳಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಿನ ಚಳಿ ಇರಲಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಆಯಿತು ಎಂದು ಹೇಳುವ ಸ್ಥಳ ತಿರುವಿನಿಂದ ಹಾಗೂ ತಗ್ಗಿನಿಂದ ಕೂಡಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ನವೆಂಬರ್ ತಿಂಗಳಲ್ಲಿ ಸದರಿ ರಸ್ತೆಯಲ್ಲಿ ಚಲಿಸುವಾಗ ವಾಹನ ಸವಾರರು ತಮ್ಮ ವಾಹನನ್ನು ನಿಲ್ಲಿಸಿ ವಾಹನ ಸಂಚಾರವನ್ನು ನೋಡಿಕೊಂಡು ನಿಧಾನವಾಗಿ ಚಲಾಯಿಸುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ದಿನ ಆರೋಪಿ ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

7. ಅಪಘಾತ ಆಯಿತು ಎಂದು ಹೇಳಲಾದ ಸ್ಥಳದಲ್ಲಿ ಇದ್ದ ನನ್ನ ಬೈಕ್ ನ್ನು ಸದರಿ ಅಪಘಾತ ಸ್ಥಳದಿಂದ ರಸ್ತೆಯ ಎಡಭಾಗ ಕ್ಕೆ  ನಾನೇ ನಿಲ್ಲಿಸಿರುತ್ತೇನೆ. ಸಾಕ್ಷಿ ಮುಂದುವರೆದು ಸದರಿ ಅಪಘಾತ ರಸ್ತೆಯ ಮಧ್ಯದಲ್ಲಿ ಆಗಿದುದ್ದರಿಂದ ಸದರಿ ಬೈಕ್ ರಸ್ತೆಯ ಮಧ್ಯ ಭಾಗದಲ್ಲಿ ಬಿದಿದ್ದರಿಂದ ಸದರಿ ಬೈಕ್ ನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಸದರಿ ಬೈಕ್ ನ್ನು ಸದರಿ ಅಪಘಾತ ಸ್ಥಳದಿಂದ ತನ್ನ ತಪ್ಪನ್ನು ಮುಚ್ಚಿಕೊಳ್ಳುವ ಸಲುವಾಗಿ ಸದರಿ ಬೈಕ್ ನ್ನು ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ಬೇರೆ ವಾಹನಗಳು ಓಡಾಡುತ್ತಿದ್ದರಿಂದ ಸದರಿ ವಾಹನಗಳ ಸಂಚಾರಕ್ಕಾಗಿ ತೊಂದರೆ ಆಗಬಾರದು ಎಂಬ ಕಾರಣಕ್ಕಾಗಿ ಸದರಿ ನನ್ನ ಬೈಕ್ ನ್ನು ಸದರಿ ಅಪಘಾತ ಸ್ಥಳದಿಂದ ರಸ್ತೆಯ ಎಡಭಾಗಕ್ಕೆ ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

8. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಪಂಚನಾಮೆ ಕಾಲಕ್ಕೆ ಸದರಿ ಸ್ಥಳದಲ್ಲಿ ಹಾಜರು ಇರಲಿಲ್ಲ, ಹಾಗೂ ಅಪಘಾತ ಸ್ಥಳವನ್ನು ಪೋಲೀಸರಿಗೆ ತೋರಿಸಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಅಪಘಾತ ಆದ 10–11 ದಿನಗಳ ನಂತರ ಆರೋಪಿ ಮತ್ತು ಆರೊಪಿ ಚಾಲನೆ ಮಾಡುತ್ತಿದ್ದ ವಾಹನದ ನಂಬರನ್ನು ಪೊಲೀಸರು ತಿಳಿಸಿರುತ್ತಾರೆ.

9. ಸದರಿ ಅಪಘಾತ ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ನೀರಗಾನ್ ಕ್ರಾಸ್ ಕಡೆಯಿಂದ ಹೆರೂರು–ಶಿರಸಿ ಮುಖ್ಯ ರಸ್ತೆಗೆ ಒಮ್ಮೆಲೆ ಬಂದಿದ್ದರಿಂದ ಸದರಿ ಅಪಘಾತ ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆ ದಿನ ಅಪಘಾತ ಸ್ಥಳದಿಂದ ನನ್ನ ಮೊಟಾರ್ ಸೈಕಲ್ ನ್ನು ಸದರಿ  ಸ್ಥಳದಿಂದ ರಸ್ತೆಯ ಎಡಭಾಗಕ್ಕೆ ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

10. ಆರೊಪಿ ಆ ದಿನ ತನ್ನ ಮಹೇಂಧ್ರಾ ಬೂಲೆರೂ ಪಿಕ್ ಅಪ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿ ನಮ್ಮ ಮೋಟಾರ್ ಸೈಕಲ್ ಅಪಘಾತಪಡಿಸಿ ತನ್ನ ಮಹೇಂದ್ರಾ ಬೂಲೆರೂ ಪಿಕ್ ಅಪ್ ವಾಹನವನ್ನು ಸದರಿ



ಅಪಘಾತ ಸ್ಥಳದಲ್ಲಿ ನಿಲ್ಲಿಸದೇ ಹೋಗಿರುತ್ತಾನೆ ಎಂದು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ತಂದೆ ಸುಬ್ರಾಯ ಹೆಗಡೆ ರವರು ಸದರಿ ಅಪಘಾತದಿಂದ ಮೃತ ಪಟ್ಟ ಬಗ್ಗೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಗೆ ಸಹಾಯ ಆಗಲಿ ಎಂದು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

12. ದಿಃ 08-11-2023 ರಂದು ಆರೋಪಿ ತನ್ನ ಮಹೇಂದ್ರಾ ಬೂಲೆರೂ ಪಿಕ್ ಅಪ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಅಪಘಾತವನ್ನು ಮಾಡಿಲ್ಲ ಎಂದರೆ ಸರಿಯಲ್ಲ.

13. ಪೋಲೀಸರ ಹೇಳಿಕೆ ಆಧಾರದ ಮೇಲೆ ಅಪಘಾತ ಪರಿಹಾರ ಪಡೆಯುವ ಸಲುವಾಗಿ ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**